ಶ್ರೀ ಡಿ.ವಿ.ಸದಾನಂದಗೌಡ:- ಎಂ.ಆರ್.ಪಿ.ಎಲ್. ತ್ಯಾಜ್ಯವಸ್ತುಗಳನ್ನು ಬಿಟ್ಟಿರುವ ಬಗ್ಗೆ ಉಸ್ತುವಾರಿ ಸಚಿವರು ಹೇಳಿಕೆ ನೀಡುವುದಿಲ್ಲವೆ?

ಉಪಾಧ್ಯಕ್ಷರು:- ಇಲ್ಲ.

ಶ್ರೀ ಡಿ.ವಿ.ಸದಾನಂದಗೌಡ:- ಇದನ್ನು ನಾವು ವಿರೋಧಿಸಿ ಸಭಾತ್ಯಾಗ ಮಾಡುತ್ತಿದ್ದೇನೆ.

(ಶ್ರೀ ಡಿ.ವಿ.ಸದಾನಂದಗೌಡ, ಶ್ರೀ ರುಕ್ಮಯ್ಯಪೂಜಾರಿ, ಶ್ರೀ ಅಂಗಾರ, ಶ್ರೀ ರಮಾನಾಥ ರೈ ಮುಂತಾದ ದಕ್ಷಿಣ ಕನ್ನಡ ಜಿಲ್ಲಾ ಶಾಸಕರು ಸಭಾತ್ಯಾಗ ಮಾಡಿದರು)

10. ವಿತ್ತೀಯ ಕಾರ್ಯಕಲಾಪಗಳು.

ವಿಷಯ:- ನಗರಾಭಿವೃದ್ಧಿ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ.

ಉಪಾಧ್ಯಕ್ಷರು:- ಮಾನ್ಯ ಸಗೀರ್ ಅಹಮದ್‌ರವರೆ, ತಾವು ಬೇಡಿಕೆಯ ಮೇಲೆ ಮಾತನಾಡಿ. ಈಗಾಗಲೇ ಇದರ ಬಗ್ಗೆ ತಮ್ಮ ಪಕ್ಷದವರು ನಲವತ್ತು ನಿಮಿಷ ಮಾತನಾಡಿದ್ದೀರಿ ಅದನ್ನು ಲಕ್ಷ್ಯಯಲ್ಲಿಟ್ಟುಕೊಂಡು ಮಾತನಾಡಿ. ತಮ್ಮ ಪಕ್ಷಕ್ಕೆ 185 ನಿಮಿಷ ಬೇಡಿಕೆಯ ಬಗ್ಗೆ ಮಾತನಾಡಲು ಅಲಾಟ್ ಮಾಡಲಾಗಿದೆ.

+ಶ್ರೀ ಸಿ.ಆರ್.ಸಗೀರ್ ಅಹಮದ್ (ಚಿಕ್ಕಮಗಳೂರು):- ಮಾನ್ಯ ಉಪಾಧ್ಯಕ್ಷರೆ, ನಾನು ನಮ್ಮ ಪಕ್ಷದ ಹಿರಿಯ ಮುಖಂಡರು ಮತ್ತು ನಮ್ಮ ಪಕ್ಷದ ಶಾಸನ ಸಭೆಯ ನಾಯಕರಾದ ಮಾನ್ಯ ಖರ್ಗೆಯವರ ಜೊತೆ ಮಾತನಾಡಿ ಸಮಯವನ್ನು ನಿಗದಿಪಡಿಸುವಲ್ಲಿ ತೀರ್ಮಾನ ಮಾಡಿಕೊಂಡಿದ್ದೇವೆ. ತಾವು ನಗರಾಭಿವೃದ್ಧಿ ಇಲಾಖೆಯ ಬಗ್ಗೆ ಚರ್ಚೆ ಮಾಡಲು ನಮ್ಮ ಪಕ್ಷಕ್ಕೆ ಮೂರು ಗಂಟೆಗಳ ಅವಕಾಶ ಕೊಟ್ಟಿದ್ದೀರಿ. ಆದರೆ ತಾವು ಆ ಭಾಗದ ಸದಸ್ಯರಿಗೆ ನಾವು ಮಾತನಾಡುವಾಗ ಸ್ವಲ್ಪ ತಾಳ್ಮೆಯಿಂದಿರಬೇಕೆಂದು ಮಾರ್ಗದರ್ಶನ ಮಾಡಬೇಕಾಗುತ್ತದೆ. ಉಪಮುಖ್ಯಮಂತ್ರಿಯವರು ಬಹಳ ಚೆನ್ನಾಗಿ ವಿಚಾರ ಹೇಳಿದ್ದಾರೆ.

04.30 ಪಿ.ಎಂ

ಸನ್ಮಾನ್ಯ ಉಪಾಧ್ಯಕ್ಷರೇ, ನಗರಾಭಿವೃದ್ಧಿಯ ಬೇಡಿಕೆ ಮೇಲೆ ಚರ್ಚೆ ನಡೆಯುತ್ತಾ ಇರುವಂತಹ ಸಂದರ್ಭದಲ್ಲಿ, ಈ ರಾಜ್ಯದ ಜನರಿಗೆ ಅದರಲ್ಲೂ ಬಡತನದ ರೇಖೆಯ ಅಡಿಯಲ್ಲಿ ಇರುವಂತಹ ಬಡವರಿಗೆ ನಿವೇಶನಗಳನ್ನು ಮತ್ತು ಮನೆಗಳನ್ನು ವಿತರಣೆ ಮಾಡುವುದರ ಬಗ್ಗೆ ಈ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎನ್ನುವುದರ ಬಗ್ಗೆ ನಾನು ಆಗಲೇ ಅನೇಕ ಮಾಹಿತಿಗಳನ್ನು ತಮ್ಮ ಮೂಲಕ ಸರ್ಕಾರಕ್ಕೆ ಒದಗಿಸಿದ್ದೇನೆ. ಮಾನ್ಯ ಉಪಾಧ್ಯಕ್ಷರೇ, ತಮ್ಮ ಗಮನಕ್ಕೆ ತರುವಂತಹ ಇನ್ನೊಂದು ವಿಚಾರ ಏನೆಂದರೆ, ಹಿಂದಿನ ಸಾಲಿನ ಅಧಿವೇಶನ ಪ್ರಾರಂಭ ಆಗುವಂತಹ ಸಂದರ್ಭದಲ್ಲಿ ನಮ್ಮ ಈ ರಾಜ್ಯದ ರಾಜ್ಯಪಾಲರವರು ಅವರ ಭಾಷಣದಲ್ಲೂ ಸಹ ವಿವರವಾಗಿ ಒಂದು ಹೇಳಿಕೆಯನ್ನು

ಮಾಡಿದ್ದಾರೆ. ಈ ರಾಜ್ಯದ ಬಡಜನರಿಗಾಗಿ, ಈ ರಾಜ್ಯದ ಬಡ ಜನರ ಏಳಿಗೆಗಾಗಿ ನಾವು ನಿವೇಶನಗಳನ್ನು ಮತ್ತು ಮನೆಗಳನ್ನು ನಿರ್ಮಿಸುವಂತಹ ಕಾರ್ಯಕ್ರಮದಲ್ಲಿ ನಾವು ತೊಡಗಿದ್ದೇವೆ ಎಂದು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಹಿಂದಿನ ಸಾಲಿನಲ್ಲಿ ಈ ರಾಜ್ಯದ ಅರ್ಥ ಮಂತ್ರಿಗಳಾದಂತಹವರು ಒಂದು ಹೇಳಿಕೆಯನ್ನು ಮಾಡಿದ್ದಾರೆ. ಮಾನ್ಯ ಅರ್ಥ ಮಂತ್ರಿಗಳು ತಮ್ಮ ಬಜೆಟ್ ಭಾಷಣದ 40ನೇ ಪುಟದಲ್ಲಿ ಏನು ಹೇಳುತ್ತಾರೆ ಎಂದರೆ, "The govermnent is committed to solve the Housing problem of the economically weaker sections. To bring them into the safer focus, a separate housing cell has been created in August, 1995. The government would launch a massive programme of distributing 2.54 lakhs house - sites and construction of 1,26,244 houses under different schemes. The break-up of this housing component is as follows:-..."

ಸನ್ಮಾನ್ಯ ಉಪಾಧ್ಯಕ್ಷರೇ, ಮಾನ ಅರ್ಥ ಮಂತ್ರಿಗಳು ಈ ಬಜೆಟ್ ಮಂಡನೆ ಮಾಡುವಂತಹ ಸಂದರ್ಭದಲ್ಲಿ ಅವರು ಹೇಳಿದ ಮಾತುಗಳನ್ನು ಕೇಳಿ, ಇಲ್ಲಿ ಅನೇಕ ನಮ್ಮ ಶಾಸಕ ಮಿತ್ರರು, ಪ್ರಾಯಶಃ ಈ ಟೇಬಲ್‌ಗಳು ಒಡೆದು ಹೋಗುತ್ತವೋ ಎನ್ನುವ ಒಂದು ಆಲೋಚನೆಯಲ್ಲಿ ನಾವು ಇದ್ದೆವು, ಅಷ್ಟು ಆಸಕ್ತಿ, ಅಷ್ಟು ಉತ್ಸಾಹದಿಂದ, ಈ ಬಡವರ ಬಗ್ಗೆ ಚಿಂತನೆ ಮಾಡುವಂತಹ ಈ ಸಂದರ್ಭದಲ್ಲಿ ಇಲ್ಲಿಯವರೆಗೆ ಆದ ಪ್ರಗತಿಯ ಬಗ್ಗೆ ನಾವು ಪ್ರಶ್ನೆ ಮಾಡಿದಾಗ ಪ್ರಾಯಶಃ ನಿವೇಶನಗಳಾಗಲೀ, ಮನೆಗಳನ್ನು ನಿರ್ಮಿಸುವಂತಹ ಕಾರ್ಯದಲ್ಲಾಗಲೀ ಇವರು ನೂರಕ್ಕೆ ನೂರರಷ್ಟು ವಿಫಲರಾಗಿರುವ ಸಂಗತಿಯನ್ನು ನಾವು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇನ್ನು ಮುಖ್ಯವಾಗಿ ಇರುವಂತಹ ವಿಚಾರ ಎಂದರೆ, ಈ ರಾಜ್ಯದ ಹಿಂದಿನ ಮುಖ್ಯಮಂತ್ರಿಗಳೂ, ಹಾಲಿ ನಮ್ಮ ರಾಷ್ಟ್ರದ ಪ್ರಧಾನಮಂತ್ರಿಗಳು ಆದಂತಹವರು, ಈ ಸದನದಲ್ಲಿ ಹೇಳಿರುವಂತಹ ಒಂದು ಭಾಷಣದ ಕೆಲವು ಅಂಶಗಳನ್ನು ಅಧಿಕೃತ ವರದಿಯ ವಾಲ್ಯೂಮ್ 1-5ರಲ್ಲಿರುವಂತೆ ತಮ್ಮ ಗಮನಕ್ಕೆ ತರಬಯಸುತ್ತೇನೆ.

''ಇನ್ನೊಂದು ಮಾತು ಹೌಸಿಂಗ್ ಬಗ್ಗೆ ಹೇಳಬೇಕಾಗುತ್ತದೆ. ಈ ರಾಜ್ಯದಲ್ಲಿ ಇರತಕ್ಕಂತಹ ನಾಲ್ಕನೇ ದರ್ಜೆ ನೌಕರರು, ಯಾರಿಗೆ ಸ್ವಂತ ಮನೆ ಅಥವಾ ಯಾರಿಗೆ ಸೈಟಿಲ್ಲವೋ ಅಂತಹವರಿಗೆ ಇದೇ ರಾಜ್ಯದಲ್ಲಿ ಅವರವರ ನಗರಗಳಲ್ಲಿ, ಅವರು ಬಯಲು ಸೀಮೆಯಿಂದ ಇಲ್ಲಿಗೆ ಬರಬೇಕಾಗಿಲ್ಲ ಅಥವಾ ಬೆಳಗಾವಿಯಿಂದ ಇಲ್ಲಿಗೆ ಬರಬೇಕಾಗಿಲ್ಲ, ಅವರವರ ನಗರಗಳಲ್ಲಿ ಇರತಕ್ಕಂತಹ, ಯಾರು ಆ ನಾಲ್ಕನೇ ದರ್ಜೆ ಸಣ್ಣ ಸಣ್ಣ ನೌಕರರಿದ್ದಾರೆ, ಅವರು ವಾಚ್‌ಮನ್ ಇರಬಹುದು, ಸ್ವೀಪರ್ಸ್ ಇರಬಹುದು, ಅಂತಹವರಿಗೆ ಸರ್ಕಾರ ಕನಿಷ್ಟ ರಿಯಾಯಿತಿ ದರದಲ್ಲಿ ನಿವೇಶನಗಳನ್ನು ಒದಗಿಸಿಕೊಟ್ಟು,

ಅವರಿಗೆ ಮನೆ ಕಟ್ಟಿಕೊಡುವುದಕ್ಕಾಗಿ ಅವಕಾಶ ಮಾಡಿ ಕೊಡಬೇಕು ಎನ್ನುವಂತಹ ಒಂದು ಯೋಜನೆಯನ್ನು ರೂಪಿಸಬೇಕೆಂದು ಸರ್ಕಾರದ ನೀತಿಯನ್ನು ಈ ಸದನದಲ್ಲಿ ಘೋಷಣೆ ಮಾಡುವುದಕ್ಕೆ ಇಚ್ಛಿಪಡುತ್ತೇನೆ'' ಎಂದು ಹೇಳಿದ್ದಾರೆ. ಸನ್ಮಾನ್ಯ ಉಪಾಧ್ಯಕ್ಷರೇ, ಇದು ಬಹಳ ಪ್ರಮುಖವಾದಂತಹ ಒಂದು ಪ್ರಶ್ನೆ. ಈ ರಾಜ್ಯದ ಬಡ ಜನರ ಬಗ್ಗೆ ವಿರೋಧ ಪಕ್ಷದವರಾಗಲೀ ಅಥವಾ ಆಡಳಿತ ಪಕ್ಷದವರಾಗಲೀ ಚಿಂತನೆ ಮಾಡಬೇಕಾದಂತಹ ಈ ಸಂದರ್ಭದಲ್ಲಿ ಕೇವಲ ರಾಜಕೀಯ ಲಾಭಕ್ಕಾಗಿ ಬಡ ಜನರಿಗೆ ಆಸೆಯನ್ನು ತೋರಿಸುವಂತಾದ್ದು ಸರಿಯಲ್ಲ ಎಂಬುದು ನನ್ನ ಭಾವನೆ. ಆ ದೃಷ್ಟಿಯಲ್ಲಿ ಸರ್ಕಾರ ಇದರ ಬಗ್ಗೆ ಹೇಳುತ್ತದೆ, ಇವರಿಗೆ ಒಂದು ಸೆಲ್ ಅನ್ನು ನಾವು ಪ್ರಾರಂಭ ಮಾಡಿದ್ದೇವೆ ಆಗಸ್ಟ್ 1995ರಲ್ಲಿ ಎಂದು ಹೇಳುತ್ತಾರೆ. ಆ ಸೆಲ್‌ನ ಕರ್ತವ್ಯ ಏನು? ಆ ಸೆಲ್ ಈ ರಾಜ್ಯದ ನಗರ ಪ್ರದೇಶಗಳಲ್ಲಿ ವಾಸಿಸುತ್ತಿರುವಂತಹ ಬಡ ಜನರ ಬಗ್ಗೆ ಚಿಂತನೆ ಮಾಡುವಂಥಾದ್ದರ ಬಗ್ಗೆ ಇವರು ಏನು ಕಾರ್ಯಕ್ರಮ ರೂಪಿಸಿದ್ದಾರೆ ಅದರ ಬಗ್ಗೆ ಯಾವ ಮಾಹಿತಿ ಇವತ್ತು ಜಿಲ್ಲಾ ಮಟ್ಟದ ಅಧಿಕಾರಿಗಳಾಗಲೀ ಅಥವಾ ನಮ್ಮಂತಹ ನಗರ ಪ್ರದೇಶಗಳಿಂದ ಬಂದಿರುವಂತಹ ಶಾಸಕರುಗಳಿಗಾಗಲಿ ಯಾವುದೇ ಮಾಹಿತಿಯೂ ಕೂಡ ಲಭ್ಯವಿರುವುದಿಲ್ಲ. ಆದುದರಿಂದ ಈ ಸರ್ಕಾರ ಏನು ಬಡ ಜನರ ಹೆಸರಿನ ಮೇಲೆ, ಬಡವರಿಗೆ ಉಪಕಾರ ಮಾಡುತ್ತೇವೆ ಎಂದು ಹೇಳಿ ಅನೇಕ ಕಾರ್ಯಕ್ರಮಗಳನ್ನು ಈ ಸಂದರ್ಭದಲ್ಲಿ ರೂಪಿಸಿರುವಂಥಾದ್ದು ನೂರಕ್ಕೆ ನೂರರಷ್ಟು ಆ ಬಡವರಿಗೆ ವಂಚನೆ ಮಾಡುವಂತಹ ಕಾರ್ಯಕ್ರಮವಾಗಿದೆಯೇ ವಿನಃ ಬೇರೆಯವರಿಗೆ ಯಾವುದೇ ರೀತಿಯ ಸೌಕರ್ಯ, ಸವಲತ್ತು ಈ ಸರ್ಕಾರ ಇವರಿಗೆ ಒದಗಿಸಲಿಕ್ಕೆ ಸಾಧ್ಯವಾಗಿಲ್ಲವೆಂದು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದು ಬಹಳ ಮುಖ್ಯವಾದ ವಿಚಾರ. ನಮ್ಮ ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದಂತಹ ಅನೇಕ ವಿಚಾರಗಳಲ್ಲಿ ಮುಖ್ಯವಾದಂತಹ ವಿಚಾರ ಎಂದರೆ, ನಮ್ಮ ಕೊಳಚೆ ನಿರ್ಮೂಲನ ಮಂಡಳಿಯ ಒಂದು ವಿಚಾರ. ತಮಗೆ ಗೊತ್ತಿದೆ, ಇವತ್ತು ಸರ್ಕಾರವೇ ನೇರವಾಗಿ ಒಂದು ಬಡವರ ಬಗ್ಗೆ ಮಾಹಿತಿಯನ್ನು ಸದನಕ್ಕೆ ಒದಗಿಸಿಕೊಟ್ಟಿದೆ. ಡಾ: ಜಗನ್ ಶಂಕರ್ ಅವರ ಹೊಸ ಸರ್ವೆ ಪ್ರಕಾರ ಇವತ್ತು ಈ ರಾಜ್ಯದಲ್ಲಿ 1532 ಕೊಳಚೆ ಪ್ರದೇಶಗಳಿವೆ ಎಂದು ಅವರು ಹೇಳುತ್ತಿದ್ದಾರೆ. ಕೊಳಚೆ ಪ್ರದೇಶಗಳ ಸಂಖ್ಯೆ ಇನ್ನೂ ಹೆಚ್ಚು ಇದೆ ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ ನನಗೆ ತಿಳಿದ ಮಟ್ಟಿಗೆ 1994-95ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಎಲ್ಲಾ ನಗರ ಪ್ರದೇಶಗಳಲ್ಲಿ ಕೊಳಚೆ ನಿರ್ಮೂಲನ, ಈ ಒಂದು ವತಿಯಿಂದ ಸರ್ವೆ ನಡೆಸಿದಂತಹ ಸಂದರ್ಭದಲ್ಲಿ 1268 ಕೊಳಚೆ ಪ್ರದೇಶಗಳಿವೆ ಎಂದು ಒಂದು ಸಮೀಕ್ಷೆ ನಡೆಸಿದೆ, ಆದರೆ ಈಗ ಸರ್ಕಾರ ಒಂದು ವ್ಯಕ್ತಿಯನ್ನು ನೇಮಿಸಿ ಡಾ:ಜಗನ್ ಶಂಕರ್ ಅವರ ಹೊಸ ಸರ್ವೆ ಮುಖಾಂತರ 1532 ಕೊಳಚೆ ಪ್ರದೇಶಗಳು ಇರುವಂತಹ ಜಾಗದಲ್ಲಿ 15 ಲಕ್ಷ ಜನ ವಾಸಿಸುತ್ತಿದ್ದಾರೆ. ಇವರಿಗೆ ಹಮ್ಮಿಕೊಂಡಿರುವಂತಹ ಕಾರ್ಯಕ್ರಮಗಳ ಬಗ್ಗೆ ಇವತ್ತು ಹೇಳಬೇಕಾಗಿದೆ. ಸರ್ಕಾರ ಇವರ ಬಗ್ಗೆ ಎಚ್ಚರವನ್ನು ವಹಿಸಬೇಕಾಗುತ್ತದೆ. ಬಡ ಜನರ ಬಗ್ಗೆ ನಾವು ಹೋರಾಟ

ಮಾಡುವಂತಹವರು, ಬಡ ಜನರ ಬಗ್ಗೆ ನಾವು ಅವರ ಏಳಿಗೆಗೆ ದುಡಿಯುವಂತಹ ಜನರು. ನಾವು ಅವರ ಒಂದು ಅಸ್ತಿತ್ವದ ಬಗ್ಗೆ, ಅವರ ಜೀವನವನ್ನು ಕಳೆಯುವುದರ ಬಗ್ಗೆ ನಾವು ಇವತ್ತು ಗಂಭೀರವಾದಂತಹ ವಿಚಾರಗಳ ಮೇಲೆ ಚರ್ಚೆ ಮಾಡಬೇಕಾಗುತ್ತದೆ. ಇವತ್ತು ಅವರ ಅಸ್ತಿತ್ವದ ಬಗ್ಗೆ ಮಾತನಾಡುವುದಾದರೆ, ಇವತ್ತು ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಿದ್ದರು, ಪೌರ ಕಾರ್ಮಿಕರು ಒಂದು ಮುಷ್ಕರ ಹೂಡಿರುವಂತಹ ಸಂದರ್ಭದಲ್ಲಿ ಅವರ ಕರ್ತವ್ಯಗಳು ಏನು ಎಂಬ ಬಗ್ಗೆ ನಾವು ಇವತ್ತು ಚರ್ಚೆ ಮಾಡುತ್ತಿದ್ದೆವು. ಅವರು ಮನುಷ್ಯರಾಗಿ, ಮನುಷ್ಯರ ಸೇವೆಯನ್ನು ಮಾಡುತ್ತಿರುವಂತಹ ಸಂದರ್ಭದಲ್ಲಿ ಅವರಿಗೆ ಸೌಕರ್ಯ ಒದಗಿಸಕೊಡುವ ಬಗ್ಗೆ ನಾವು ಚಿಂತನೆ ಮಾಡುತ್ತಿದ್ದೆವು. ಇವತ್ತು ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವಂತಹ ಜನರ ಬಗ್ಗೆ ತಾವು ಹಮ್ಮಿಕೊಂಡಿರುವಂತಹ ಕಾರ್ಯಕ್ರಮಗಳು ಏನು? ಅಧ್ಯಕ್ಷರೆ, ಇವರು ಬಜೆಟ್ ಪುಸ್ತಕದ 26ನೇ ಪುಟದಲ್ಲಿ 5:7ರಲ್ಲಿ ಈ ರೀತಿ ಹೇಳಿದ್ದಾರೆ.

"The Board is providing the important basic civic amenities, such as, drinking water, streetlights, roads, drains, public latrines and community centres wherever possible to the slum-dwellers under the Slum Improvement Scheme the Board has proveded these facilities to 11.30 Lakhs Slum Dwellers by spending 1187.29 lakhs." ಎಂದು ಹೇಳಿದ್ದಾರೆ. ಸನ್ಮಾನ್ಯ ಉಪ ಸಭಾಧ್ಯಕ್ಷರೆ, ನಾನು ತಮ್ಮ ಗಮನಕ್ಕೆ ತರುವಂತಹ ವಿಚಾರ ಏನೆಂದರೆ ನಮಗೆ ಬಹಳ ದುಃಖವಾಗುತ್ತದೆ, ತಮಗೆ ತಿಳಿದ ಹಾಗೆ ನಗರಾಭಿವೃದ್ಧಿ ಇಲಾಖೆಯಲ್ಲಿ, ನಾನು ಪ್ರಾಯಶಃ ಈಗ ಹಾಲಿ ಮಂತ್ರಿಗಳಾದಂತಹ ಮಾನ್ಯ ಬಚ್ಚೇಗೌಡರ ಮೇಲೆ ಆಪಾದನೆ ಮಾಡುತ್ತೇನೆಂದು ಅಲ್ಲ. ಈ ಸರ್ಕಾರ ಅಸ್ಥಿತ್ವಕ್ಕೆ ಬಂದ ನಂತರ ಮಾನ್ಯ ಬಚ್ಚೇಗೌಡರು ಮೊನ್ನೆ ಮೊನ್ನೆ ತಾನೆ ಈ ಖಾತೆಯನ್ನು ವಹಿಸಿಕೊಂಡಿದ್ದಾರೆ. ಆದುದರಿಂದ ಈ ಹಿಂದೆ ಒಂದು ವರ್ಷ ಏಳು ತಿಂಗಳು ನಗರಾಭಿವೃದ್ಧಿ ಇಲಾಖೆಯಿಂದ ಆಗಿರುವಂತಹ ಅಭಿವೃದ್ಧಿ ಕೆಲಸಗಳು ಏನು ಎನ್ನುವುದರ ಬಗ್ಗೆ ದೊಡ್ಡ ಒಂದು ಪ್ರಶ್ನೆ ಉದ್ಭವವಾಗಿದೆ. ತಮಗೆ ಗೊತ್ತಿದೆ, ತಾವು ಒಂದು ವರ್ಷ ಏಳು ತಿಂಗಳಲ್ಲಿ 11,30,000 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಾದರೆ, ನೀವು ಇಷ್ಟು ವರ್ಷದಲ್ಲಿ ಇನ್ನು ಎಷ್ಟು ಹಣ ಖರ್ಚು ಮಾಡುವುದಕ್ಕೆ ಬಹಳ ಸುಲಭ. ತಮ್ಮ ಕ್ಷೇತ್ರದಲ್ಲಿಯೂಸಹ ಇವತ್ತು ಕೊಳಚೆ ಪ್ರದೇಶಗಳು ಇರುವಂತಹ ಜಾಗ ಇರಬಹುದು, ಅವರ ಸ್ಥಿತಿ ಗತಿಗಳ ಬಗ್ಗೆ ಇವತ್ತು ಹೇಳುವುದಾದರೆ, ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಏಕೆ ನಾನು ಇದನ್ನು ಹೇಳುತ್ತೇನೆ, ಗಂಭೀರವಾಗಿ ನಗರಾಭಿವೃದ್ಧಿ ಇಲಾಖೆ ಮಂತ್ರಿಗಳು ಹಾಗೂ ಅಧಿಕಾರಿಗಳು ಸಂಪೂರ್ಣವಾದ ಪ್ರಯತ್ನ ಈ ಭಾಗಗಳಲ್ಲಿ ಮಾಡಬೇಕಾಗುತ್ತದೆ. ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವಂಥ ಜನ, ಇದು ಬಹಳ ಮುಖ್ಯ. ನಾವು ಹರಿಜನರು, ನಾವು ಪರಿಶಿಷ್ಟ ಜಾತಿ ನಾವು ಪರಿಶಿಷ್ಟ ವರ್ಗ

ಹಿಂದುಳಿದಂತಹ ವರ್ಗ ಅಲ್ಪ ಸಂಖ್ಯಾತರ ಬಗ್ಗೆ ಮಾತನಾಡುವಂತಹ ಸರ್ಕಾರ ಇವರ ಏಳಿಗೆಗೆ ಏನು ಮಾಡಿದೆ ಎನ್ನುವುದರ ಬಗ್ಗೆ ಪ್ರಶ್ನೆ ಹುಟ್ಟುತ್ತದೆ. ಇವತ್ತು ಯಾರಿಗೆ ಆ ಶಕ್ತಿ ಸಾಮರ್ಥ್ಯ ಇಲ್ಲ ಅಂತಹ ಜನ ಶೋಷಣೆಗೆ ಒಳಪಟ್ಟಂತಹ ಜನ ಈ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವುದು ಸರ್ಕಾರ ಇವತ್ತು ಗುರುತಿಸಿದೆ. ಇವತ್ತು ಕುಡಿಯುವ ನೀರಿನ ಅವ್ಯವಸ್ಥೆ ಎಂದರೆ ಒಂದು ಕೊಳವೆ ಬಾವಿ ಯೋಜನೆಯಲ್ಲಿ ಕೊಳವೆ ಬಾವಿ ಕೊರೆಯುವಂತಹ ಒಂದು ಯಂತ್ರ ಆ ಭಾಗಗಳಲ್ಲಿ ಹೋಗತಕ್ಕಂತಹ ವ್ಯವಸ್ಥೆ ಇಲ್ಲ. ಆದರೆ ತಾವು ಕುಡಿಯುವ ನೀರಿನ ಯೋಜನೆಗೆ ಹಮ್ಮಿಕೊಂಡಿರುವಂತಹ ಕಾರ್ಯಕ್ರಮಗಳು ಏನು, ಇದರಲ್ಲಿ ಎಷ್ಟು ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನರಿಗೆ ನೀರನ್ನು ಒದಗಿಸಿಕೊಟ್ಟಿದ್ದಾರೆ ಎನ್ನುವುದರ ಬಗ್ಗೆ ನಾವಾಗಿ ಸರ್ಕಾರದ ಎದುರಿಗೆ ಈ ಪ್ರಶ್ನೆ ಹಾಕಬೇಕಾಗುತ್ತದೆ. ಇನ್ನು ಹೇಳುವುದಾದರೆ ಯಾವ ಯಾವ ರೀತಿಯ ತೊಂದರೆ ತಾಪತ್ರಯಗಳು ಈ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನರಿಗೆ ಆಗುತ್ತಿದೆ ಎಂದರೆ, ನಾಗರೀಕರ ಸವಲತ್ತು ಪೂರೈಸುವಂತಹ ವಿಚಾರ ಒಂದು ಕಡೆ ಇದ್ದರೆ, ಇವತ್ತು ನನಗೆ ತಿಳಿದ ಹಾಗೆ ಪ್ರಾಯಶಃ ನನ್ನ ಅಂಕಿ ಸಂಖ್ಯೆಗಳಲ್ಲಿ ವ್ಯತ್ಯಾಸವಾದರೆ, ನಿಗದಿತ ಅಂಕಿ ಸಂಖ್ಯೆ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇವತ್ತು ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವಂತಹ ಜನರು ಖಾಸಗಿ ಜಮೀನಿನಲ್ಲಿ ಈ ಕೊಳಚೆ ಪ್ರದೇಶಗಳನ್ನು ನಿರ್ಮಿಸಿದ್ದಾರೆ ನಾಲ್ಕು ನೂರಕ್ಕೂ ಮೀರಿ ಕೆಲವು ಪ್ರಕರಣಗಳು ನ್ಯಾಯಾಲಯದ ಮುಂದೆ ಇರುವಂಥದ್ದು ನನ್ನ ಗಮನಕ್ಕೆ ಬಂದಿದೆ. ನಾನು ಇದರ ಬಗ್ಗೆ ಅರಿವು ಮಾಡಿಕೊಂಡಿದ್ದೇನೆ. ನ್ಯಾಯಾಲಯದಲ್ಲಿ ಮೊಕದ್ದಮೆಗಳನ್ನು ಹೂಡಿ ಕೊಳಚೆ ಪ್ರದೇಶದ ಅಭಿವೃದ್ಧಿಗೆ ವಿಳಂಬ ಆಗಿರುವ ಬಗ್ಗೆ ಸರ್ಕಾರ ಏನು ಕಾರ್ಯಕ್ರಮ ಹಮ್ಮಿಕೊಂಡಿದೆ, ಅದಕ್ಕೆ ಒಂದು ಸರ್ಕಾರೀ ಆದೇಶ ಹೊರಡಿಸುತ್ತೇವೆಂದು ಹೇಳುತ್ತಾರೆ. ತಾವು ಮಾಲೀಕರ ಜೊತೆ ಚರ್ಚೆ ನಡೆಸಿ, ಹೊಂದಾಣಿಕೆ ಮಾಡಿಕೊಂಡು ಆ ಭಾಗದ ಕೊಳಚೆ ಪ್ರದೇಶದ ನಿವಾಸಿಗಳಿಗೆ ಸೌಕರ್ಯ ಒದಗಿಸಿಕೊಡಬೇಕೆಂದು ಇವತ್ತು ಸರ್ಕಾರ ಹೇಳುತ್ತಿದೆ. ಆದರೆ ಎಷ್ಟು ಜನ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನರನ್ನು ಈ ರೀತಿಯ ಒಂದು ವ್ಯವಸ್ಥಿತವಾದ ಹೊಂದಾಣಿಕೆ ಮುಖಾಂತರ ಸೌಕರ್ಯಗಳನ್ನು ಒದಗಿಸಿಕೊಟ್ಟಿದ್ದಾರೆ ಎನ್ನುವುದರ ಬಗ್ಗೆ ನನಗಂತೂ ಈ ಪುಸ್ತಕದಲ್ಲಾಗಲಿ, ಅಥವಾ ಬೇರೆ ಪುಸ್ತಕದಲ್ಲಾಗಲಿ ಯಾವುದೇ ದಾಖಲೆಗಳಾವು ಕಂಡು ಬರುವುದಿಲ್ಲ. ಏಕೆಂದರೆ, ಇದು ಕೇವಲ ವಿರೋಧ ಪಕ್ಷದವರು ಅಥವಾ ಆಡಳಿತ ಪಕ್ಷದವರು ಎನ್ನುವ ವಿಚಾರ ಅಲ್ಲ, ಚುನಾವಣೆ ಸಂದರ್ಭದಲ್ಲಿ ಎಲ್ಲಾ ಕೊಳಚೆ ಪ್ರದೇಶಗಳಿಗೆ ಹೋಗಿರುವಂಥ ಸಂದರ್ಭದಲ್ಲಿ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವಂತಹ ನಿವಾಸಿಗಳಿಗೆ ನಾವು ಬೀದಿದೀಪಗಳನ್ನು ಒದಗಿಸಿ ಕೊಡುತ್ತೇವೆ, ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡುತ್ತೇವೆ, ರಸ್ತೆ ಮಾರ್ಗಗಳನ್ನು ನಾವು ಒದಗಿಸಿಕೊಡುತ್ತೇವೆ, ನಿಮಗೆ ಬೇಕಾದಂತಹ ಎಲ್ಲಾ ನಾಗರೀಕ ಸವಲತ್ತುಗಳನ್ನು ಒದಗಿಸಿಕೊಡುತ್ತೇವೆಂದು ಹೇಳಿ ಒಂದು ಮುಕ್ಕಾಲು ವರ್ಷದಿಂದ ತಾವು ಏನು ಆಶ್ವಾಸನೆಗಳನ್ನು ಕೊಟ್ಟು ಆಸೀನಗಳನ್ನು

ಆಲಂಕರಿಸುವುದಕ್ಕೆ ಅವಕಾಶ ಕೊಟ್ಟಿದ್ದೀರಿ, ಅಲ್ಲಿಯ ಆಸೀನದಲ್ಲಿ ನಾವು ಕುಳಿತು ನಾವು ಬಹಳ ಜೋಪಾನವಾಗಿ ಬಡವರ ಬಗ್ಗೆ ಆಲೋಚನೆ ಮಾಡುತ್ತಿದ್ದೇವೆ ಎನ್ನುವುದರ ಬಗ್ಗೆ ಇದು ಕೇವಲ ವಿರೋಧ ಪಕ್ಷದಲ್ಲಿ ಇರುವಂತಹ ಸದಸ್ಯರು ಹೇಳುವಂತಹ ವಿಚಾರ ಅಲ್ಲ. ಆಡಳಿತ ಪಕ್ಷದಲ್ಲಿ ಇರುವಂತಹ ಸದಸ್ಯರೂ ಸಹ ಇದರ ಬಗ್ಗೆ ಮಾತನಾಡುವುದಕ್ಕೆ ಆಸಕ್ತರಿದ್ದಾರೆಂದು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಇನ್ನೊಂದು ಕಡೆ ಹೇಳುತ್ತಾರೆ. "The Board is ccnstructing E.W.S. houses, tenaments in slum areas in the State under this Scheme. Since inception, the Board has constructed 16187 houses at an estimated expenditure of Rs.3786.70 lakhs as on 31-3-1996." ಪ್ರಾಯಶಃ ಕೆಲವರು ಹೇಳುತ್ತಾರೆ ಮಾಯ ಮಾಡುವಂತಹ ಒಂದು ಲಾಠಿ ಬೇಕು, 'ಕುಲ್ಜ ಸುಮ್ ಸುಮ್' ಎಂದು ಒಂದು ಚಿತ್ರ ಬಂದಿತ್ತು. ಆ ಲಾಠಿ ತೋರಿಸಿದರೆ ಬಾಗಿಲು ಓಪನ್ ಆಗುತ್ತದೆ, ಲಾಠಿ ಮತ್ತೊಮ್ಮೆ ಹೀಗೆ ತೋರಿಸಿದರೆ ಬಾಗಿಲು ಬಂದ್ ಆಗುತ್ತದೆ. ಸರ್ಕಾರ ಮಾಡಿದ ಹೇಳಿಕೆ ಬಗ್ಗೆ ತಮ್ಮ ಗಮನಕ್ಕೆ ತರುತ್ತಿದ್ದೇನೆ. 16,187 ಮನೆಗಳನ್ನು 3,786 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ 31.3.96ಕ್ಕೆ ತಾವು ಮುಗಿಸಿದ್ದೀರಿ, ಎಂದರೆ ಇವರು ಒಂದು ವರ್ಷದ ಮೂರು ತಿಂಗಳಲ್ಲಿ ಇಷ್ಟು ಹಣ ಖರ್ಚು ಮಾಡುವುದಕ್ಕೆ ಸಾಧ್ಯವೇ ಎನ್ನುವುದರ ಬಗ್ಗೆ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಾವು ಅನೇಕ ವಿಚಾರಗಳನ್ನು ಮನಗಂಡಿದ್ದೇವೆ, ಸರ್ಕಾರ ರಚನೆ ಆದ ತಕ್ಷಣ ಈ ವಿಚಾರಗಳನ್ನು ಹೇಳುವಂತಹ ಸಂದರ್ಭದಲ್ಲಿ ಈ ಸರ್ಕಾರದವರು ಏನು ಹೇಳಿದರು ಎಂದರೆ, ಅಧಿಕಾರಿಗಳಿಗೆ ಹೇಳಿದರು, ನೀವು ಕಾಂಗ್ರೆಸ್ ಬಟ್ಟೆ ತೊಟ್ಟುಕೊಂಡಿದ್ದೀರಿ ನೀವು ತುರ್ತಾಗಿ ಕಾಂಗ್ರೆಸ್ ಬಟ್ಟೆಯನ್ನು ಬಿಚ್ಚಿ ಹಾಕಬೇಕೆಂದು ಹೇಳಿದರು. ಯಾವ ಬಟ್ಟೆ ಹಾಕಬೇಕು ಎಂದು ಆಗಿದೆ? ನಮ್ಮ ರಾಷ್ಟ್ರಧ್ವಜದ ಬಣ್ಣದ ಬಟ್ಟೆ ಹಾಕಬೇಕು. ಏಕೆ ಈ ವಿಚಾರ ಹೇಳುತ್ತಿದ್ದೇನೆ ಎಂದರೆ, ಒಂದು ಕಡೆ ಅಧಿಕಾರಿಗಳಿಗೆ ಹಿಂಸೆ ಕೊಡುವಂಥದ್ದು, ಇನ್ನೊಂದು ಕಡೆ ಫಲಾನುಭವಿಗಳಿಗೆ ಹಿಂಸೆ ಕೊಡುವಂಥದ್ದು. ಇನ್ನೊಂದು ಕಡೆ ರಾಜಕೀಯವಾಗಿ ಟೀಕೆ ಮಾಡುವಂಥದ್ದರಲ್ಲಿ ಈ ಸರ್ಕಾರ ಸಾರ್ವಜನಿಕರ, ಬಡವರ ಮತ್ತು ದೀನ ದಲಿತರ ಉದ್ಧಾರಕ್ಕೆ ಹಮ್ಮಿಕೊಂಡಿರುವಂತಹ ಕಾರ್ಯಕ್ರಮಗಳಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆಂದು ಈ ಸಂದರ್ಭದಲ್ಲಿ ಹೇಳಿದರೆ ತಪ್ಪಾಗಲಾರದು ಎಂದು ತಮಗೆ ಹೇಳುತ್ತಿದ್ದೇನೆ. ಇನ್ನು ತಮ್ಮ ಗಮನಕ್ಕೆ ತರುವಂಥದ್ದು ಎಂದರೆ, ಈ ಕೊಳಚೆ ಪ್ರದೇಶಗಳ ನಿವಾಸಿಗಳ ಅಭಿವೃದ್ಧಿಗಾಗಿ ಹಮ್ಮಿಕೊಳ್ಳುವಂತಹ ಕಾರ್ಯಕ್ರಮಗಳ ಬಗ್ಗೆ ತಾವು ನೋಡಬೇಕು. ಅನೇಕರು ವಿಚಾರ ಮಾಡಬಹುದು, ಸಗೀರ್ ಅಹಮದ್ ಸಾಹೇಬರು ನಗರಾಭಿವೃದ್ಧಿ ಸಚಿವರಾಗಿದ್ದರು, ಅವರು ಏನು ಮಾಡಿದರು ಎಂದು ಪ್ರಶ್ನೆ ಬರಬಹುದು. ನಾನು ಒಂದೇ ಒಂದು ಪ್ರಶ್ನೆ ಈ ಸರ್ಕಾರದಲ್ಲಿ ಇರುವಂತಹ ನಗರಾಭಿವೃದ್ಧಿ ಸಚಿವರಿಗೆ ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಎಷ್ಟು ಕ್ಷೇತ್ರಗಳಲ್ಲಿ, ಎಷ್ಟು ಕೊಳಚೆ ಪ್ರದೇಶಗಳಿಗೆ ತಾವು ಭೇಟಿ

ಕೊಟ್ಟಿದ್ದೀರಿ? ಏಕೆಂದರೆ ಆ ಪ್ರದೇಶದ ಕಷ್ಟ ಸುಖಗಳನ್ನು ಕೇಳಿಕೊಳ್ಳುವಂತಹ ಸಂದರ್ಭದಲ್ಲಿ ಮಂತ್ರಿಗಳು ಸ್ವತಃ ಆ ಕೊಳಚೆ ಪ್ರದೇಶಗಳಿಗೆ ಹೋಗಬೇಕಾಗುತ್ತದೆ. ಅಲ್ಲಿಯ ನಿವಾಸಿಗಳ ಬೇಡಿಕೆಗಳನ್ನು ಕೇಳಬೇಕಾಗುತ್ತದೆ. ಆ ನಿವಾಸಿಗಳು ಎದುರಿಸುತ್ತಿರುವ ಕಷ್ಟಗಳನ್ನು ನಾವು ನೋಡಬೇಕಾಗುತ್ತದೆ. ನಾವು ನೋಡಿದ್ದೇವೆ, ನೀವು ಮತ ಕೇಳುವಂತಹ ಸಂದರ್ಭದಲ್ಲಿ ನಮ್ಮದು ಯಾವುದೇ ತರಹದ ಬಟ್ಟೆ, ಯಾವುದೇ ತರಹದ ಪಾದರಕ್ಷೆಗಳಿದ್ದರೂ ಸಹ ಆ ಭಾಗಕ್ಕೆ ಹೋಗಿ ಅಪ್ಪ ನೀನು ನನಗೆ ಮತ ಕೊಡಬೇಕು, ತಾಯಿ ನೀನು ನನಗೆ ಮತ ಕೊಡಬೇಕು, ನನ್ನ ಪಕ್ಷದ ಸರ್ಕಾರ ಬಂದರೆ ನಿನಗೆ ಒಳ್ಳೆಯದು ಮಾಡುತ್ತಾರೆ ಎಂದು ಹೇಳುವಂತಹ ನಾವು ರಾಜಕಾರಣಿಗಳೂ ಚುನಾವಣೆ ಮುಗಿದ ನಂತರ ಈ ಕುರ್ಚಿಗಳ ಮೇಲೆ ಕೂತ ನಂತರ ಕೊಳಚೆ ಪ್ರದೇಶದ ನಿವಾಸಿಗಳ ಚಿಂತನೆ ಬಿಟ್ಟು ಹೋಗಬೇಕಾಗುತ್ತದೆ. ಕಾರಣ ಏನೆಂದರೆ, ಚುನಾವಣೆ ಬರುವಂತಹ ಸಮಯ ಹತ್ತಿರ ಇದ್ದಾಗ ಮತ್ತೆ ಹೋಗುತ್ತೇವೆ. ದೀಪ ಹಾಕಿಸುತ್ತೇವೆ, ನೀರನ್ನು ಒದಗಿಸಿಕೊಡುತ್ತೇವೆ, ನಿವೇಶನ ಒದಗಿಸಿಕೊಡುತ್ತೇವೆ,

ಶ್ರೀ ಹೆಚ್.ಕೆ.ಕುಮಾರಾಸ್ವಾಮಿ:- ನೀವು ಹಾಗೆ ಮಾಡುತ್ತಿದ್ದೀರಾ ಅಥವಾ ಭಿನ್ನವಾಗಿದ್ದೀರಾ ಎಂಬುದನ್ನು ಹೇಳಿಬಿಡಿ. ನೀವು ಹೇಳುವಂತಹ ವಿಷಯ ಜನರಲೈಸ್ ಮಾಡುತ್ತಿದ್ದೀರಿ.

ಶ್ರೀ ಸಿ.ಆರ್.ಸಗೀರ್ ಅಹಮದ್:- ನಾನು ನಿಮ್ಮ ಮುಖಾಂತರ ಏನು ಪ್ರಶ್ನೆ ಹಾಕುತ್ತೇನೆ ಎಂದರೆ, ಇವರು ಶಾಸಕರಾಗಿ ಬಂದು ಒಂದು ಮುಕ್ಕಾಲು ವರ್ಷ ಆಯಿತು. ಕೊಳಚೆ ಪ್ರದೇಶದ ಅಭಿವೃದ್ಧಿ ಬಗ್ಗೆ ಆಡಳಿತ ಸದಸ್ಯರಾಗಿ ಬೇಲೂರು ಕ್ಷೇತ್ರದಲ್ಲಿ ಎಷ್ಟು ಜನ ಕೊಳಚೆ ಪ್ರದೇಶದ ನಿವಾಸಿಗಳಿಗೆ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೀರಿ, ಎನ್ನುವುದರ ಬಗ್ಗೆ ಅವರು ಮಾತನಾಡುವಂತಹ ಸಂದರ್ಭದಲ್ಲಿ ಹೇಳಬೇಕು. ನಾನು ಅವರು ಮಾತನಾಡುವುದನ್ನು ಕಿವಿ ಬಿಚ್ಚಿ ಕೇಳುವುದಕ್ಕೆ ಸಿದ್ಧನಾಗಿದ್ದೇನೆ.

ಶ್ರೀ ಹೆಚ್.ಕೆ.ಕುಮಾರ್‌ಸ್ವಾಮಿ:- ನನ್ನ ಕ್ಷೇತ್ರದ ಅಭಿವೃದ್ಧಿಗೆ ನಾನು ಏನು ಮಾಡಿದ್ದೇನೆ, ಅದು ನನಗೆ ಗೊತ್ತಿದೆ. ಅದನ್ನು ಅವರು ಇಂಟರ್‌ಫೀಯರ್ ಆಗಿ ಅವರು ಏನೂ ಮಾಡುವುದು ಬೇಡ. ಚಿಕ್ಕಮಗಳೂರನ್ನು ಸರಿಯಾಗಿ ನೋಡಿಕೊಳ್ಳಲಿ, ಅಷ್ಟೇ ಸಾಕು. ನಮ್ಮ ಕ್ಷೇತ್ರ ನಾವು ನೋಡಿಕೊಳ್ಳುತ್ತಿದ್ದೇವೆ, ಬೇರೆಯವರ ಕ್ಷೇತ್ರದ ಬಗ್ಗೆ ಹೇಳುವುದು ಬೇಡ. ಬಡವರ ಬಗ್ಗೆ ಯಾರೂ ಗುತ್ತಿಗೆ ತೆಗೆದುಕೊಂಡಿಲ್ಲ. ನೀವು ಒಬ್ಬರೇ ಅಲ್ಲ ಗುತ್ತಿಗೆ ತೆಗೆದುಕೊಂಡಿರುವವರು, ನಾವೂ ಗುತ್ತಿಗೆ ತೆಗೆದುಕೊಂಡಿದ್ದೇವೆ. ಚಿಕ್ಕಮಗಳೂರಿನ ಬಗ್ಗೆ ನೋಡಿಕೊಳ್ಳಿ.

ಶ್ರೀ ಸಿ.ಆರ್.ಸಗೀರ್ ಅಹ್ಮದ್:- ನಾನು ಅವರಿಗೊಂದು ವಿಚಾರ ಹೇಳುತ್ತೇನೆ. ಹೇಳಬೇಕಾಗುತ್ತದೆ ಇದು ರಾಜಕೀಯ ನಾನೇನೂ ಮಾಡುವುದಕ್ಕಾಗುವುದಿಲ್ಲ. ವಿಧಾನಸಭೆಯ ಚುನಾವಣೆಗಳು ನಡೆಯುವಂಥ ಸಂದರ್ಭದಲ್ಲಿ ಜನತಾ ದಳದ

ರಾಜಕೀಯ ಮುಖಂಡರು ಏನು ಹೇಳುತ್ತಿದ್ದರೆಂದರೆ ಕಾಂಗ್ರೆಸ್ ಕಚ್ಚಾಟ ನೋಡಿದಿರಿ. ಕಾಂಗ್ರೆಸ್‌ನಲ್ಲಿ ಎರಡು ಮೂರು ಮುಖ್ಯಮಂತ್ರಿಗಳು ಬದಲಾವಣೆಗಳು ಆಗಿದ್ದು ನೋಡಿದ್ದೀರಿ ಎಂದು ವೇದಿಕೆ ಮುಖಾಂತರವಾಗಿ ಹೇಳುತ್ತಿದ್ದರು. ಇವೊತ್ತು ನಿಮ್ಮಲ್ಲಿ ಮೂರನೆಯವರು ಆಗುತ್ತಿರುವ ಪ್ರಯತ್ನ ನಡೆದಿರುವುದು ಗಮನದಲ್ಲಿಟ್ಟುಕೊಳ್ಳಬೇಕು.

ಶ್ರೀ ಸೋಮ್ಲಾ ನಾಯಕ್:- ಖಂಡಿತ ನಿಮ್ಮ ಸಹಕಾರ ಕೇಳುವುದಿಲ್ಲ.

ಶ್ರೀ ಸಿ.ಆರ್.ಸಗೀರ್ ಅಹ್ಮದ್:- ನೋಡಿ ಉಪಾಧ್ಯಕ್ಷರೇ, ಅವರು ನನಗೆ ಉಪ ಪ್ರಶ್ನೆಯನ್ನು ಹಾಕುತ್ತಾರೆ. ನನ್ನ ಸಹಕಾರ ಕೇಳುವುದಿಲ್ಲ ಎಂದು ಹೇಳುತ್ತಾರೆ.

ಶ್ರೀ ಎಸ್.ಕೃಷ್ಣಪ್ಪ:- ಇಲ್ಲಿಂದ ಮುಖ್ಯಮಂತ್ರಿಗಳನ್ನು ದೆಹಲಿಗೆ ಕಳುಹಿಸುವುದರಲ್ಲಿ ಅವರದೂ ಸಹಕಾರ ಇದೆ. ಇಲ್ಲಿನ ಮುಖ್ಯಮಂತ್ರಿಗಳನ್ನು ಪ್ರಧಾನಿಯವರನ್ನಾಗಿ ಮಾಡುವಲ್ಲಿ ತಮ್ಮದೂ ಸಹಕಾರ ಇದೆ. ಈ ದೇಶಕ್ಕೆ ಉತ್ತಮ ಪ್ರಧಾನಿ ಬೇಕು ಎಂದಾಗ ಅವರನ್ನು ಸೆಲೆಕ್ಟ್ ಮಾಡಿ ಪ್ರಧಾನ ಮಂತ್ರಿಯನ್ನಾಗಿ ಅವರ ಸಹಕಾರದಿಂದ ಮಾಡಿದ್ದೇವೆ. ಅದನ್ನೇಕೆ ಅವರು ತಿಳಿದುಕೊಳ್ಳುತ್ತಿಲ್ಲ.

ಶ್ರೀ ಸಿ.ಆರ್.ಸಗೀರ್ ಅಹ್ಮದ್:- ನಾನು ತಮ್ಮ ಮುಖಾಂತರವಾಗಿ ಆಳುತ್ತಿರುವ ಸದಸ್ಯರ ಗಮನಕ್ಕೆ ಒಂದು ವಿಚಾರವನ್ನು ತರುತ್ತಿದ್ದೇನೆ. ನಮ್ಮದು ಒಂದು ಕಂಡೀಷನ್ ಇದೆ. ಒಳ್ಳೆಯ ಕೆಲಸ ಮಾಡಿದರೆ ನಾವು ಸಹಕಾರ ಕೊಡುತ್ತಿದ್ದೇವೆಂದು ಹೇಳಿದ್ದೇವೆ. ಅಲ್ಲಿಯವರೆಗೆ ನಮ್ಮ ಸಹಕಾರ ಅಲ್ಲಿ ಇದೆ. ಇಲ್ಲಿ ಇಲ್ಲ. ಇಲ್ಲಿ ಕೊಡಿ ಎಂದೂ ಕೂಡ ಅವರು ಹೇಳಿಲ್ಲ. ಏಕೆ ಆಲೋಚನೆ ಮಾಡಿದ್ದೇವೆ ಎನ್ನುವುದರ ಬಗ್ಗೆ ಬೇಡಿಕೆ ಸಂದರ್ಭದಲ್ಲಿ ಹೇಳುತ್ತಿದ್ದೇನೆಂದರೆ....

ಶ್ರೀ ಕೆ.ಬಿ.ಶಾಣಪ್ಪ:- ನಾವು ಮುಖ್ಯಮಂತ್ರಿಯವರನ್ನು ಕಳೆದುಕೊಳ್ಳಲಿಲ್ಲ, ಅವರಿಗೆ ಪ್ರಧಾನಿಯನ್ನಾಗಿ ಮಾಡಿ ಉನ್ನತ ಪದವಿಗೆ ಕಳುಹಿಸಿದ್ದೇವೆ.

ಶ್ರೀ ಸಿ.ಆರ್.ಸಗೀರ್ ಅಹ್ಮದ್:- ಇಲ್ಲಿ ಒಂದು ಪದವನ್ನು ಬಳಸಬೇಕು. ಆದರೆ ಬಳಸುವ ಹಾಗಿಲ್ಲ. ಏಕೆಂದರೆ ಇದು ಸಾರ್ವಜನಿಕ ವೇದಿಕೆಯಲ್ಲ, ಸಾರ್ವಜನಿಕ ವೇದಿಕೆ ಇದ್ದರೆ ಬಳಸುತ್ತಿದ್ದೆ. ಅದರಲ್ಲಿ ನಮ್ಮ ಹೆಗಲೂ ಒಂದು.

ಶ್ರೀ ಸೋಮ್ಲಾನಾಯಕ್:- ನಿಮ್ಮ ಹೆಗಲಿನಿಂದ ಹೋಗಿಲ್ಲ.

ಶ್ರೀ ಸಿ.ಆರ್.ಸಗೀರ್ ಅಹ್ಮದ್:- ಅದರಿಂದಾನೆ ನೀವು ಉಳಿದಿರುವುದು. ಏಕೆ ಸುಮ್ಮನೆ ಕೆದಕುತ್ತೀರಿ ನನಗೆ? ಮಾಡಿರುವಂಥದ್ದರ ಬಗ್ಗೆ ಮಾಡದಿರುವಂಥದ್ದರ ಬಗ್ಗೆ, ಇವರು ಇಷ್ಟೆಲ್ಲಾ ಹೇಳುತ್ತಾರೆ ಅಧ್ಯಕ್ಷರೇ, ಅವರು ಈ ಕಡೆಗೆ ಏಕೆ ಬಂದರು ಎನ್ನುವುದರ ಬಗ್ಗೆ ಚಿಂತೆ ಇಲ್ಲ. ಏಕೆ ಚಿಂತೆ ಇಲ್ಲ ಎಂದರೆ ಈ ಲಾಟ್ರಿ ಡಬ್ಬಕ್ಕೆ ಕೈ ಹಾಕಿದ ಮೇಲೆ ಏನೋ ಒಂದು ನಂಬರ್ ತಲೆಯಲ್ಲಿ ಇರುತ್ತದೆ ಧಿಡೀರನೆ ಬಂದು ಬಿಡುತ್ತದಲ್ಲಾ ಹಾಗೆ ಬಂದು ಬಿಟ್ಟಿದ್ದಾರೆ ಇವರು. ಲಾಟ್ರಿ ಪೆಟ್ಟಿಗೆಗೆ ಹುಡುಗರನ್ನು ಇಟ್ಟು ಲಾಟ್ರಿ ಎತ್ತು ಎಂದು

ಹೇಳುತ್ತೇವೆ. ಯಾವುದೋ ಒಂದು ನಂಬರ್ 10-11 ಎಂದು ನಂಬರ್ ಇಟ್ಟುಕೊಂಡಿರುತ್ತೇವೆ ನಂಬರ್ ಎತ್ತಪ್ಪ ಎಂದು ಹೇಳಿದಾಗ ಧಿಡೀರನೆ ನಂಬರ್ ಬರುತ್ತದೆ. ಹಾಗೇ

ಶ್ರೀ ಎಸ್.ಕೃಷ್ಣಪ್ಪ:- ನಾವು ಲಾಟ್ರಿಯೊಳಗೆ ಕೈ ಹಾಕಿಲ್ಲ. ಜನ ಲಾಟ್ರಿ ಬಾಕ್ಸಿನೊಳಗೆ ಕೈಹಾಕಿದ ಮೇಲೆ ನಾವು ಈಚೆಗೆ ಬಂದಿದ್ದೇವೆ.

ಶ್ರೀ ಸಿ.ಆರ್.ಸಗೀರ್ ಅಹ್ಮದ್:- ಮಾನ್ಯ ಉಪಾಧ್ಯಕ್ಷರೇ, ನಾನು ಮಾತನಾಡಬೇಕೋ, ಬಿಡಬೇಕೋ ಹೀಗೆ? ಅವರು ನನ್ನ ಬಗ್ಗೆ ಟೀಕೆ ಟಿಪ್ಪಣಿಯನ್ನು ಮಾಡಿದರೆ,

ಉಪಾಧ್ಯಕ್ಷರು:- ತಾವು ಮಾತನಾಡಿ.

ಶ್ರೀ ಎಸ್ಕೃಷ್ಣಪ್ಪ:- ಪದೇ ಪದೇ ಕೆಣಕಿ ಮಾತನಾಡುವುದು ಅವರಿಗೆ ಬಹಳ ಇಚ್ಛೆ. ಅವರು ಏನು ಮಾಡುತ್ತಿದ್ದಾರೆಂದರೆ ಈ ಕಡೆ ನೋಡುತ್ತಿದ್ದಾರೆ, ನಿಮ್ಮ ಕಡೆ ನೋಡುವುದಿಲ್ಲ. ಈ ಕಡೆ ನೋಡಿ ನೋಡಿ ಮಾತನಾಡಿದರೆ ಅವರಿಗೆ ಬಹಳ ಸಂತೋಷವಾಗುತ್ತದೆ.

ಶ್ರೀ ಸಿ.ಆರ್.ಸಗೀರ್ ಅಹ್ಮದ್:- ಉಪಾಧ್ಯಕ್ಷರೇ, ನಾನು ನಿಮ್ಮ ಕಡೆ ನೋಡುತ್ತಿಲ್ಲವೇ? ಅವರ ಕಡೆ ಏಕೆ ನೋಡಲಿ ನಾನು?

ಶ್ರೀ ಹೆಚ್.ಎಸ್.ಪ್ರಕಾಶ್:- ಇಡೀ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡತಕ್ಕಂಥ ಯಾರು ಬಡವರು ಇದ್ದಾರೆ ಅವರ ಚದರ ಅಡಿಗೆ ಐದು ರೂಪಾಯಿ ಟ್ಯಾಕ್ಸ್ ಹಾಕಿ ಅವರಿಗೆ ಖಾತೆ ಹಾಗೂ ರಿಜಿಸ್ಟರ್ ಮಾಡಿ ಕೊಟ್ಟಿದ್ದು ನಮ್ಮ ಸರ್ಕಾರ ಎಂಬುದನ್ನು ಅವರ ಗಮನಕ್ಕೆ ತರುತ್ತೇನೆ.

ಶ್ರೀ ಸಿ.ಆರ್.ಸಗೀರ್ ಅಹ್ಮದ್:- ಸನ್ಮಾನ್ಯ ಉಪಾಧ್ಯಕ್ಷರೇ, ಕೆಲಸ ಮಾಡುವಂಥ ಸರ್ಕಾರಕ್ಕೆ ನಮ್ಮ ಸಹಕಾರ ಇದೆ ಎಂದು ನಾನು ಮೊದಲೇ ತಿಳಿಸಿದ್ದೇನೆ. ಸನ್ಮಾನ್ಯ ಉಪಾಧ್ಯಕ್ಷರೇ, ನಾನು ನಿಮಗೆ ಏನು ಹೇಳಲಿ ಆ ಪರಮಾತ್ಮ ಜನತಾ ದಳ ಎಂದು ಏನು ಅವರು ಹೆಸರು ಇಟ್ಟಿದ್ದೀರಿ ಅದ್ನನು ಸಧ್ಯದಲ್ಲೇ ಬದಲಾವಣೆ ಮಾಡಬೇಕಾಗುತ್ತದೆ. ಮಾಡದೇ ಹೋದಲ್ಲಿ ಆ ಜನತಾ ದಳದ ಆಯಸ್ಸು ಕೇವಲ ಎರಡೂವರೆ ಮೂರು ವರ್ಷ. ಆದುದರಿಂದ ಈಗ ಅದಕ್ಕೆ ಹೊಸ ಹೆಸರು ಏನು ಇಟ್ಟಿದ್ದಾರೆ ನವ ನಿರ್ಮಾಣ ವೇದಿಕೆ ಎಂದು ಅದಕ್ಕೇನಾದರೂ ಇವರೂ ಸ್ವಲ್ಪ ಉತ್ತೇಜನ ಕೊಟ್ಟರೆ ಇವರು ಉಳಿಯುವಂಥ ಸಾಧ್ಯತೆ ಇದೆ ಇಲ್ಲವಾದರೆ ಎರಡು ಮೂರು ವರ್ಷದಲ್ಲಿ ಹಿಂದಿನ ಗತಿ ಅವರಿಗೂ ಆಗುತ್ತದೆಂದು ತಮಗೂ ಗೊತ್ತಿರುವಂಥ ವಿಚಾರ. ಅದು ಹೌದೋ ಅಲ್ಲವೋ?

ಉಪಾಧ್ಯಕ್ಷರು:- ತಾವು ವಿಷಯಕ್ಕೆ ಬನ್ನಿ.

+ಶ್ರೀ ಸಿ.ಆರ್.ಸಗೀರ್ ಅಹಮದ್:- ಆದುದರಿಂದ ಸನ್ಮಾನ್ಯ ಉಪಾಧ್ಯಕ್ಷರೇ ಒಳ್ಳೆಯ ಕೆಲಸ ಮಾಡಿರುವಂಥ ಸಂದರ್ಭದಲ್ಲಿ ನಾವೂ ಕೂಡ ಹೊಗಳುತ್ತೇವೆ. ಆದರೆ ನಾನು ಹೇಳುವುದೇನೆಂದರೆ ತಾವು ಕೊಳಚೆ ಪ್ರದೇಶಗಳ ನಿವಾಸಿಗಳಿಗೆ ನಾಗರೀಕ ಸೌಲಭ್ಯಗಳನ್ನು ಏನು ಒದಗಿಸಬೇಕಾಗಿತ್ತೋ ಅದನ್ನು ಒದಗಿಸುವುದರಲ್ಲಿ ವಿಫಲರಾಗಿದ್ದೀರಿ. ತಾವು ಇಲ್ಲಿಯವರೆಗೆ ಮನೆಗಳನ್ನು ನಿರ್ಮಾಣ ಮಾಡಿ ಕೊಟ್ಟಿದ್ದರ ಬಗ್ಗೆ ಹೇಳಿದ್ದೀರಿ. ಆದರೆ 1995-96, 1996-97ನೇ ಸಾಲಿನಲ್ಲಿ ಏನು ಹಣವನ್ನು ನಿಗದಿಪಡಿಸಿದ್ದೀರಿ ಆ ಹಣವನ್ನು ಖರ್ಚು ಮಾಡುವುದಕ್ಕೆ ಶಕ್ತಿ, ಸಾಮರ್ಥ್ಯ ನಿಮ್ಮಲ್ಲಿ ಇಲ್ಲ. ಮುಂದಿನ ದಿನಗಳಲ್ಲಿ ನೀವು ಆ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನರ ಬಗ್ಗೆ ಕಾಳಜಿ ವಹಿಸಬೇಕು ಎಂದು ಹೇಳುವುದರ ಜೊತೆಗೆ ಇಲ್ಲಿ ತೆಗೆದುಕೊಳ್ಳುವಂಥ ಕಾಮಗಾರಿಗಳ ಬಗ್ಗೆ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಕಾರಣವೇನೆಂದರೆ ಇವೊತ್ತು ಒಳಚರಂಡಿ ಕೆಲಸ ಪ್ರಾರಂಭ ಮಾಡುವಂಥ ಸಂದರ್ಭದಲ್ಲಿ ಐದಾರು ವರ್ಷಗಳಾದರೂ ಸಹಿತ ಚರಂಡಿಗಳ ಕೆಲಸಗಳನ್ನು ಪೂರೈಸಲು ಸಾಧ್ಯವಾಗಿಲ್ಲ. ಕೊಳಚೆ ಪ್ರದೇಶಗಳ ಮಂಡಲಿಯಿಂದ ಆ ಭಾಗಗಳಲ್ಲಿ ಬೀದಿ ದೀಪಗಳನ್ನು ಅಳವಡಿಸುವುದಕ್ಕೆ ಸಾಧ್ಯವಾಗಿಲ್ಲ. ಇದು ಮುಖ್ಯಮಂತ್ರಿಗಳ ಗಮನಕ್ಕೆ ಕೂಡ ಬಂದಿರತಕ್ಕಂಥ ವಿಚಾರ. ಏಕೆಂದರೆ ಅನೇಕ ಜಿಲ್ಲಾ ಕೇಂದ್ರಗಳಲ್ಲಿ, ನಗರ ಪ್ರದೇಶಗಳಲ್ಲಿ ಅವರು ಪ್ರವಾಸ ಮಾಡುತ್ತಿರುವಂಥ ಸಂದರ್ಭದಲ್ಲಿ ಬಂದಿರತಕ್ಕಂಥ ವಿಚಾರಗಳು. ಅಲ್ಲಿ ಅನೇಕ ಕಡೆ ಕಿರು ನೀರು ಸರಬರಾಜು ಮಾಡುವಂಥ ಯೋಜನೆಗಳು ಇದ್ದು, ಆ ಯೋಜನೆಗಳು ಪೂರೈಸುವಂಥ ಹಂತ ಇದ್ದರೂ ಸಹಿತ ಅಧಿಕಾರಿಗಳು ಇವೊತ್ತು ಬಹಳ ಉತ್ಸಾಹದಿಂದ ಕೊಳಚೆ ನಿರ್ಮೂಲನಾ ಮಂಡಳಿಯ ವತಿಯಿಂದ, ಕೊಳಚೆ ಪ್ರದೇಶಗಳ ನಿವಾಸಿಗಳ ಜನರಿಗೆ ಅವರ ಏಳಿಗೆಗಾಗಿ ಕೆಲಸಮಾಡಿರುವ ಬಗ್ಗೆ ನಮಗೆ ತೃಪ್ತಿ ಇಲ್ಲ. ಮತ್ತು ಇಲ್ಲಿರುವಂಥ ಶ್ರೀಮಾನ್ ಬಚ್ಚೇಗೌಡರು ಅದರ ಬಗ್ಗೆ ಚಿಂತನೆ ಮಾಡಬೇಕು, ಆ ಬಡ ಜನರ ಏಳಿಗೆಯ ಬಗ್ಗೆ ಆಲೋಚನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾನೆ.....

ಶ್ರೀ ಬಿ.ಎನ್.ಬಚ್ಚೇಗೌಡ:- ಮಾನ್ಯ ಸಗೀರ್ ಅಹ್ಮದ್‌ರವರೇ ವಸತಿ ಸಚಿವರು ಮಾನ್ಯ ರೇವಣ್ಣನವರು ಇದ್ದಾರೆ.

ಶ್ರೀ ಸಿ.ಆರ್.ಸಗೀರ್ ಅಹ್ಮದ್:- ಮಾನ್ಯ ಮಂತ್ರಿಗಳಿಗೆ ತಿಳಿಸುವುದೇನೆಂದರೆ ನಲವತ್ತೈದು ಜನ ಮಂತ್ರಿಗಳು ಇದ್ದಮೇಲೆ ಹೇಗೆ ನೆನಪಿರಬೇಕು? ಇನ್ನೂ ಕೆಲವರ ಹೆಸರು ನನಗೆ ಗೊತ್ತಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ:- ಮಾನ್ಯ ಸಗೀರ್ ಅಹ್ಮದ್‌ರ ಬಳಿ ಕೊಳಚೆ ನಿರ್ಮೂಲನಾ ಮಂಡಳಿಯಲ್ಲಿ ಅನ್ಯಾಯ ಆಗಿರುವುದರ ಬಗ್ಗೆ ಯಾವುದಾದರೂ ಆಪಾದನೆಗಳಿದ್ದರೆ, ನನಗೆ ನೇರವಾಗಿ ಕೊಟ್ಟರೆ ಅದರಲ್ಲಿ ಯಾವ ತರಹದ ಎನ್‌ಕ್ವೈರಿ ಬೇಕಾದರೂ ನಾನು ಮಾಡುವುದಕ್ಕೆ ತಯಾರಿದ್ದೇನೆ.

ಶ್ರೀ ಸಿ.ಆರ್.ಸಗೀರ್ ಅಹ್ಮದ್:- ಹಾಗೆ ಇದ್ದಲ್ಲಿ, ಸನ್ಮಾನ್ಯ ಉಪಾಧ್ಯಕ್ಷರೇ, ಅನೇಕ ಕಡೆ, ಇಲ್ಲಿ ವಸತಿ ಸಚಿವರು, ಮಾನ್ಯ ನಗರಾಭಿವೃದ್ಧಿ ಸಚಿವರು ಇಲ್ಲಿರುವಂಥ ಸಂದರ್ಭದಲ್ಲಿ ಅವರಿಗೆ ನನ್ನ ಒಂದು ಸಲಹೆ ಏನೆಂದರೆ ಅನೇಕ ಕೊಳಚೆ ಪ್ರದೇಶಗಳಲ್ಲಿ ಅವರು ವಾಸ ಮಾಡುವಂಥ ನಿವಾಸಿಗಳಿಗೆ ನಿವೇಶನವನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಅವರಿಗೆ ಬೇರೆ ಕಡೆ ಸ್ಥಳಾಂತರಿಸಿ ನಿವೇಶನವನ್ನು ಒದಗಿಸಬೇಕು, ಮನೆಗಳನ್ನು ನಿರ್ಮಿಸುವುದರ ಬಗ್ಗೆ ಈ ಸರ್ಕಾರ ಒಂದು ನಿರ್ದಿಷ್ಟವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು.

ಉಪಾಧ್ಯಕ್ಷರು:- ಈಗ ಎಪ್ಪತ್ತು ನಿಮಿಷ ಆಯಿತು. ಮೊನ್ನೆ 40 ನಿಮಿಷ ಮಾತನಾಡಿದ್ದೀರಿ, ಇವೊತ್ತು ಮೂವತ್ತು ನಿಮಿಷವಾಯಿತು.

ಶ್ರೀ ಸಿ.ಆರ್.ಸಗೀರ್ ಅಹ್ಮದ್:- ಆಯಿತು. ಸನ್ಮಾನ್ಯ ಉಪಾಧ್ಯಕ್ಷರೇ, ನಗರಸಭೆ ಮತ್ತು ಪುರಸಭೆಗಳ ಒಂದು ವಿಚಾರದಲ್ಲಿ ಇವೊತ್ತು ಇಟ್ಟಿರುವಂಥ ಬೇಡಿಕೆಯ ಬಗ್ಗೆ ಮಾತನಾಡುವಂಥ ಸಂದರ್ಭದಲ್ಲಿ ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುವಂಥ ವಿಚಾರ ಏನೆಂದರೆ ಪುರಸಭೆ ಮತ್ತು ನಗರಸಭೆಗಳಲ್ಲಿ ಅನೇಕ ಕಾರ್ಯಕ್ರಮಗಳು ಇದೆ.

05.00 ಪಿ.ಎಂ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್.

ಉಪಾಧ್ಯಕ್ಷರು:- ಏನು ಹೇಳಿ.

ವಿಷಯ:- (ಆ) ಪರ್‌ಫಾರ್ಮೆನ್ಸ್ ಬಡ್ಜೆಟ್ ಒದಗಿಸದೇ ಇರುವ ಬಗ್ಗೆ.

+ಶ್ರೀ ಎಂ.ಮಲ್ಲಿಕಾರ್ಜು ಖರ್ಗೆ:- ನನ್ನ ಪಾಯಿಂಟ್ ಆಫ್ ಆರ್ಡರ್ ಏನು ಎಂದರೆ ಈ ದಿನ ಬೇಡಿಕೆ ಸಂಖ್ಯೆ 30, 31, 28, 29, 23, 25, 24, 37, 38, 40, 51, 47, 32, 11, 14, 10, ನಿ 35, 36, 26 ಎಂದು ಇದೆ. ಈ ಡಿಮ್ಯಾಂಡ್‌ಗಳಿಗೆ ಸಂಬಂಧಪಟ್ಟಂತೆ ಮಂತ್ರಿಗಳೂ ಕೂಡ ಸದನದಲ್ಲಿ ಹಾಜರು ಇರಬೇಕು ಎಂದು ಇದೆ. ಇದು ನನ್ನ ಒಂದನೆಯ ವಿಷಯ. ಇನ್ನು ಎರಡನೆಯದಾಗಿ ಪರಫಾರ್ಮೆನ್ಸ್ ಬಜೆಟ್ ಕೂಡ ನೀವು ಆನ್ಯೂಯಲ್ ರಿಪೋರ್ಟ್ ಜೊತೆಯಲ್ಲಿಯೇ ಕೊಡಬೇಕು ಎಂದು ಇದೆ. ಅಂದರೆ ಆ್ಯನ್ಯುಯಲ್ ರಿಪೋರ್ಟ್ ಹೋದ ವರ್ಷದ್ದು, ಫರ್‌ಫಾರ್ಮೆನ್ಸ್ ಬಜೆಟ್, ಆ್ಯನ್ಯುಯಲ್ ರಿಪೋರ್ಟ್ ಮತ್ತು ಪರಫಾರ್ಮೆನ್ಸ್ ಬಜೆಟ್ ಏನು ಇದೆ ಅದನ್ನು ಕೊಡಬೇಕು. ಆದರೆ ನಮಗೆ ಕೇವಲ ಮೂರು ಇಲಾಖೆಗಳಿಗೆ ಸಂಬಂಧಪಟ್ಟ ಹಾಗೆ ಪರ್‌ಫಾರ್ಮೆನ್ಸ್ ಬಜೆಟ್‌ಗಳನ್ನು ಮಾತ್ರ ಈಗ ಒದಗಿಸಲಾಗಿದೆ. ಹೆಲ್ತ್ ಅಂಡ್ ಫ್ಯಾಮಿಲಿ ಪ್ಲಾನಿಂಗ್, ಸೋಷಿಯಲ್ ವೆಲ್‌ಫೇರ್, ಕಾಮರ್ಸ್ ಅಂಡ್ ಇಂಡಸ್ಟ್ರೀಸ್ ಇಲಾಖೆಗಳಿಗೆ ಸಂಬಂಧಪಟ್ಟಂತೆ ಮಾತ್ರ ಪರ್‌ಫಾರ್ಮೆನ್ಸ್ ಬಜೆಟ್ ಇವೊತ್ತು ಬಂದಿದೆ. ಸುಮಾರು